ಶಾಖೆ / ವಿಷಯ : DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER:
ದಿನಾಂಕ : DATE


ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಮಾಹಿತಿ | 18 ಮಸೂದೆ ಅಂಗೀಕಾರ | 2 ವಾರ ಮುಂಚಿತವಾಗಿ ಅಧಿವೇಶನ ಅಂತ್ಯ

# ಬಜೆಟ್ ಅಧಿವೇಶನದಲ್ಲಿ ಗರಿಷ್ಠ ಉತ್ಪಾದಕತೆ ದಾಖಲು

ನವದೆಹಲಿ: ಕೇಂದ್ರ ಬಜೆಟ್ ಅಧಿವೇಶನ ಈ ಬಾರಿ ಗರಿಷ್ಠ ಉತ್ಪಾದಕತೆಯನ್ನು ಪ್ರದರ್ಶಿಸಿದೆ. ನಿಗದಿತ ಏಪ್ರಿಲ್ 8ಕ್ಕಿಂತ ಎರಡು ವಾರ ಮುಂಚಿತವಾಗಿಯೇ ಬಜೆಟ್ ಅಧಿವೇಶನ ಸಂಪನ್ನಗೊಂಡಿದೆ. ಈ ಅವಧಿಯಲ್ಲಿ ಸಂಸತ್ತಿನ ಉಭಯ ಸದನಗಳು 18 ಮಸೂದೆಗಳನ್ನು ಅಂಗೀಕರಿಸಿವೆ ಎಂದು ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ ಗುರುವಾರ ಹೇಳಿದ್ದಾರೆ.

ಪಂಚ ರಾಜ್ಯ ಚುನಾವಣೆ ಕಾರಣ ವಿವಿಧ ಪಕ್ಷಗಳ ಪ್ರಮುಖರು ಅಲ್ಲಿ ಪ್ರಚಾರ ಮತ್ತು ಇತರೆ ಚುನಾವಣಾ ಕೆಲಸ ನಿಮಿತ್ತ ತೆರಳಬೇಕಾದ ಕಾರಣ ಮುಂಚಿತವಾಗಿ ಅಧಿವೇಶನವನ್ನು ಕೊನೆಗೊಳಿಸಲಾಗಿದೆ. ಲೋಕಸಭೆ 24 ಕಲಾಪ ನಡೆಸಿದರೆ, ರಾಜ್ಯಸಭೆ 23 ಕಲಾಪ ನಡೆಸಿತು. ಮೊದಲ ಹಂತದಲ್ಲಿ ಲೋಕಸಭೆ 12 ಕಲಾಪ, ರಾಜ್ಯಸಭೆ 11 ಕಲಾಪ ನಡೆಸಿತ್ತು. ಎರಡನೇ ಅವಧಿಯಲ್ಲಿ ಎರಡೂ ಸದನಗಳು ತಲಾ 12 ಕಲಾಪ ನಡೆಸಿವೆ ಎಂದು ಸಚಿವ ಜೋಶಿ ವಿವರಿಸಿದರು.

ಜನವರಿ 29ರಂದು ಆರಂಭವಾದ ಬಜೆಟ್ ಅಧಿವೇಶನದಲ್ಲಿ ಒಟ್ಟು 20 ಮಸೂದೆಗಳು ಮಂಡಿಸಲ್ಪಟ್ಟಿವೆ. ಈ ಪೈಕಿ ಲೋಕಸಭೆಯಲ್ಲಿ 17 ಮತ್ತು ರಾಜ್ಯಸಭೆಯಲ್ಲಿ 3 ಮಸೂದೆಗಳು ಮಂಡನೆಯಾಗಿವೆ. ಇದರಲ್ಲಿ 18 ಲೋಕಸಭೆಯಲ್ಲಿ, 19 ರಾಜ್ಯಸಭೆಯಲ್ಲಿ ಅಂಗೀಕಾರವಾಗಿದೆ. ಉಭಯ ಸದನಗಳಲ್ಲಿ ಅಂಗೀಕರಿಸಲ್ಪಟ್ಟ ಮಸೂದೆಗಳ ಸಂಖ್ಯೆ 18 ಎಂದು ಜೋಶಿ ಹೇಳಿದರು.





ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಸಚಿವ ಪ್ರಲ್ಹಾದ ಜೋಶಿ.

## ದೆಹಲಿ - ಮುಂಬೈ ಎಕ್ಸ್‌ಪ್ರೆಸ್ ಹೆದ್ದಾರಿ

ದೆಹಲಿ ಮತ್ತು ಮುಂಬೈ ನಡುವೆ ಎಕ್ಸ್‌ಪ್ರೆಸ್ ಹೆದ್ದಾರಿ (ಇ-ಹೈವೇ) ನಿರ್ಮಿಸುವುದಕ್ಕೆ ಕೇಂದ್ರ ಸರ್ಕಾರ ಚಿಂತನೆ ನಡೆಸಿದೆ. ಇದು 1,300 ಕಿ.ಮೀ. ಉದ್ದದ ರಸ್ತೆಯಾಗಿರಲಿದ್ದು, ಬಸ್ ಮತ್ತು ಟ್ರಕ್‌ಗಳು ಗಂಟೆಗೆ 120 ಕಿ.ಮೀ. ವೇಗದಲ್ಲಿ ಸಂಚರಿಸಬಹುದು. ಇದರಿಂದಾಗಿ ಲಾಜಿಸ್ಟಿಕ್ಸ್ ವೆಚ್ಚ ಶೇಕಡ 70 ಕಡಿಮೆಯಾಗಲಿದೆ ಎಂದು ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಗುರುವಾರ ಲೋಕಸಭೆಗೆ ತಿಳಿಸಿದರು.



- 114% ಲೋಕಸಭೆಯ ಉತ್ಪಾದಕತೆ
- 90 % ರಾಜ್ಯಸಭೆಯ ಉತ್ಪಾದಕತೆ
- 132 ಗಂಟೆ ಲೋಕಸಭೆಯ ಕಲಾಪ
- 104 ಗಂಟೆ ರಾಜ್ಯಸಭೆಯ ಕಲಾಪ
- 146 ಸದಸ್ಯರು ಬಜೆಟ್ ಚರ್ಚೆಯಲ್ಲಿ ಭಾಗವಹಿಸಿದ್ದರು
- 14 ಗಂಟೆ 42 ನಿಮಿಷ ಬಜೆಟ್ ಕುರಿತ ಚರ್ಚೆ ನಡೆಯಿತು

## ಪ್ರಮುಖ ಮಸೂದೆಗಳು

- ಹಣಕಾಸು ಮಸೂದೆ 2021
- ನ್ಯಾಷನಲ್ ಕ್ಯಾಪಿಟಲ್ ಟೆರಿಟರಿ ಆಫ್ ಡೆಲ್ಲಿ (ಅಮೆಂಡಮೆಂಟ್) ಬಿಲ್ 2021
- ಇನ್ಶೂರೆನ್ಸ್ (ಅಮೆಂಡಮೆಂಟ್) ಬಿಲ್ 2021
- ನ್ಯಾಷನಲ್ ಬ್ಯಾಂಕ್ ಫಾರ್ ಫೈನಾನ್ಸಿಂಗ್ ಇನ್‌ಫ್ರಾಸ್ಟ್ರಕ್ಚರ್ ಆ್ಯಂಡ್ ಡೆವಲಪ್‌ಮೆಂಟ್ ಬಿಲ್ 2021

## ಎನ್‌ಎಬಿಎಫ್‌ಐಡಿ ಮಸೂದೆ ಪಾಸ್

ನ್ಯಾಷನಲ್ ಬ್ಯಾಂಕ್ ಫಾರ್ ಫೈನಾನ್ಸಿಂಗ್ ಇನ್‌ಫ್ರಾಸ್ಟ್ರಕ್ಚರ್ ಆ್ಯಂಡ್ ಡೆವಲಪ್‌ಮೆಂಟ್ (ಎನ್‌ಎಬಿಎಫ್‌ಐಡಿ) ಮಸೂದೆ 2021 ಅನ್ನು ರಾಜ್ಯಸಭೆ ಗುರುವಾರ ಅಂಗೀಕರಿಸಿದೆ. ಲೋಕಸಭೆ ಇದನ್ನು ಮಂಗಳವಾರ ಅಂಗೀಕರಿಸಿತ್ತು. ಈ ಸಂಸ್ಥೆಯ ಆಡಿಟ್ ಮಾಡಿದ ವರದಿಯನ್ನು ಪ್ರತಿ ವರ್ಷ ಸಂಸತ್ತಿನ ಉಭಯ ಸದನಗಳಲ್ಲಿ ಮಂಡಿಸಲಾಗುವುದು. ಇದರ ನೇರ ಉಸ್ತುವಾರಿ ಸಂಸತ್ತಿನ ಸುಪರ್ದಿಯಲ್ಲೇ ಇರಲಿದೆ ಎಂದು ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ರಾಜ್ಯಸಭೆಗೆ ತಿಳಿಸಿದರು.

## ಸಮಿತಿ ಅವಧಿ ವಿಸ್ತರಣೆ

ಖಾಸಗಿ ಡೇಟಾ ರಕ್ಷಣಾ ಮಸೂದೆ ಪರಿಶೀಲಿಸುವುದಕ್ಕೆ ರಚನೆಯಾದ ಸಂಸತ್‌ನ ಜಂಟಿ ಸಮಿತಿಯ ಅವಧಿಯನ್ನು ಮುಂಗಾರು ಅಧಿವೇಶನದ ತನಕ ವಿಸ್ತರಿಸಲಾಗಿದೆ. ಅಷ್ಟರೊಳಗೆ ಈ ಸಮಿತಿ ಮಸೂದೆಗೆ ಸಂಬಂಧಿಸಿದ ವರದಿಯನ್ನು ಸಲ್ಲಿಸಬೇಕು. 2019ರ ಡಿಸೆಂಬರ್‌ನಲ್ಲಿ ಈ ಸಮಿತಿಯನ್ನು ಲೋಕಸಭೆ ರಚಿಸಿದೆ. 30 ಸದಸ್ಯರ ಸಮಿತಿ ಇದಾಗಿದ್ದು, ಸದ್ಯ ಎರಡು ಸ್ಥಾನ ಖಾಲಿ ಇವೆ. ಲೋಕಸಭೆಯ 19 ರಾಜ್ಯಸಭೆಯ 9 ಸದಸ್ಯರು ಸಮಿತಿಯಲ್ಲಿದ್ದಾರೆ. ಇದರ ಅವಧಿ ವಿಸ್ತರಣೆ ಪ್ರಸ್ತಾವನೆಯನ್ನು ಬಿಜೆಪಿ ಸದಸ್ಯೆ ಮೀನಾಕ್ಷಿ ಲೇಖಿ ಮಂಡಿಸಿದ್ದು, ಧ್ವನಿ ಮತದೊಂದಿಗೆ ಸಂಸತ್ತು ಅಂಗೀಕರಿಸಿದೆ. ಇದು ನಾಲ್ಕನೇ ಬಾರಿಗೆ ಸಮಿತಿಯ ಅವಧಿ ವಿಸ್ತರಣೆ ಆಗಿದೆ.